ಹಿಂದಿನಿಂದ ಬಂದು ಕೈ ಹಿಡಿದುಕೊಂಡವಳು, 'ಅಷ್ಟೋಂದ್ ಜನ್ರ ಮುಂದೆ ಗಂಡ ಅಂತ ಕರ್ಕಂಡ್ ಬಂದು ಈಗ ಹಿಂಗ್ ಬಿಟ್ಟೋಯ್ತಿದಿಯಲ್ಲ ಯ್ಯಾ?...' ಅಂದಳು. ಅವನಿಗೆ ಹೇಳಬೇಕಾದ ಮಾತಿರಲಿಲ್ಲ. 'ನಂಗ್ಯಾರೂ ಇಲ್ಲ... ಹೆಣ್ಣೆಂಗ್ಸು ಒಬ್ಬಂಟಿಯಾಗ್ ಬದ್ಕಕಾಗಲ್ಲ ಅಂತರಲ್ಲ ಅದ್ಕೇ ಹಿಂಗ್ ರೌಡಿ ಥರಾ ಆಡ್ತಿನಿ. ನನ್ನೆಸ್ರು ರಾಣಿ' ಅಂದ್ಲು. ಪರಿಚಯವೇ ಇಲ್ಲದಿದ್ರೂ ಅಲ್ಲಿಂದ ಕೈಹಿಡಿದು ಎಳೆದುಕೊಂಡು ಬಂದ ದೇವರ ಬಗ್ಗೆ ಅವಳಿಗೆ ಒಂದು ರೀತಿಯ ಕುತೂಹಲ ಬೆಳೆದಿತ್ತು. ಅದು ಅವಳಿಗೆ ಮನುಷ್ಯರ ಮೇಲೆ ಮೂಡಿದ್ದ ಮೊದಲ ನಂಬಿಕೆಯಾಗಿತ್ತು. ದೇವರಿಗೆ ಏನನ್ನಿಸಿತೋ ಏನೋ. ಇನ್ನೊಂದು ಮಾತು ಅವಳನ್ನು ಕೇಳಲಿಲ್ಲ. 'ಇಲ್ಲಿ ರೈತುರ್ದು ಸ್ಟ್ರೈಕ್ ನಡೀತದಲ್ಲಾ ಆ ಮೈದಾನದ ದಾರಿ ಮರ್ತೋಗದೆ. ನಾನು ನಮ್ ಗೌಡರ ಜತೆ ಬಂದಿದಿನಿ...' ಅಂದ. ಅವಳು ಒಂದು ಸಂದಿಯಲ್ಲಿ ನಡೆಯತೊಡಗಿದಳು. ಇವನು ಹಿಂಬಾಲಿಸಿದ. ಹೀಗೆ ಸದ್ದಿಲ್ಲದ ಪ್ರೇಮವೊಂದು ಕಡಿಮೆ ಸಮಯದಲ್ಲಿ ಕುಡಿಯೊಡೆದಿತ್ತು.

ಭರಮಪ್ಪ ಗೌಡರು ತನ್ನ ಮುಂದೆ ದೇವರ ಜತೆ ಬಂದು ನಿಂತ ಹೆಣ್ಣುಮಗಳನ್ನು ಅಡಿಯಿಂದ ಮುಡಿವರೆಗೂ ನೋಡಿದರು. 'ನಮ್ ಸಮಂದಿಕ್ರೇ... ಇಲ್ಲೇ ಪಕ್ಕದ ಬೀದಿಲ್ಲಿದ್ರು. ನಮ್ ಜತೆ ಊರಿಗೆ ಬತ್ತದಂತೆ' ಅಂದ. ಗೌಡರು ಸರಿಯಾಗಿಯೇ ಅರ್ಥ ಮಾಡಿಕೊಂಡಿದ್ದರು. ಧರಣಿ ಆವತ್ತಿಗೇ ಮುಗಿದು ಮೆಜೆಸ್ಟಿಕ್ಕಿಗೆ ಬಂದು ಬಸ್ಸಿಗೆ ಹೊರಟರು. ಬಸ್ಸಿನಲ್ಲಿ ರಾಣಿ ದೇವರನ್ನು ಕೇಳಿದಳು: 'ನಿನ್ನೆಸ್ರೇನು?' 'ದೇವರು' ಅಂದ. 'ಹ್ಞಾಂ...' ಅಂದವಳೇ ಎರಡೂ ಕೈಜೋಡಿಸಿ ನಗುತ್ತಾ, 'ನಿಮ್ಮನೆಲಿ ನನ್ನ ಒಪ್ತಾರ..?' ಅಂದಳು. 'ನಾನೊಬ್ನೆ ಇರದು.. ನಮ್ ಗೌಡ್ರು ಒಪ್ಪಿದ್ರೆ ಸಾಕು. ನಮ್ಮೂರಲ್ಲಿ ಲಂಕೆಪ್ನೋರು ಅಂತ ಲೀಡ್ರು ಅವ್ರೆ. ಅವ್ರು ಒಪ್ತಾರೆ.. ನೀವು ಪಟ್ಣದಲ್ಲಿರಂಗೆ ನಮ್ಮಳ್ಳಿಲಿ ಇರಕ್ಕಾಗಲ್ಲ' ಅವಳ ಪ್ರಶ್ನೆಗೆ ಉತ್ತರಿಸುವ ಜತೆಗೆ ಸಲಹೆ ಕೂಡ ನೀಡಿದ. ಇಬ್ಬರೂ ಒಂಥರಾ ಹಗುರಾದರು. ಊರಿಗೆ ಬಂದರು. ಗೌಡರು ಮಡದಿ ಜಯಮ್ಮರಿಗೆ ಹೇಳಿದರು. ಅವರು ಖುಷಿಪಟ್ಟರು. ಲಂಕೆಪ್ಪರಿಗೆ ಹೇಳಿಕಳಿಸಿದರು. ಎಲ್ಲರೂ ಸೇರಿ ಮದುವೆ ಮಾಡಿದರು. ಮದುವೆಗೆ ಲಂಕೆಪ್ಪನವರು ಆಗತಾನೆ ಎಂಎಲ್‌ಸಿಯಾಗಿ ಅಧಿಕಾರ ಸ್ವೀಕರಿಸಿದ್ದ ಕವಿ ಸಿದ್ಧಲಿಂಗಯ್ಯನವರನ್ನು ಕರೆದರು. ಅವರು ಮನತುಂಬಿ ಹರಸಿ ಹೋದರು. ಈಗ್ಗೆ ಇದು ನಡೆದು ಮೂವತ್ತೆರಡು ವರ್ಷಗಳು ತುಂಬಿದವು. ಮದುವೆಯಾದ ಏಳು ವರ್ಷಗಳ ನಂತರ ದಕ್ಕಲದೇವಿಯ ಕೃಪೆಯಿಂದ ಚೆಲುವಿ ಹುಟ್ಟಿದಳು. ದೇವರ ಅಪ್ಪಅಮ್ಮ ಕಟ್ಟಿದ್ದ ಜೋಪಡಿಯನ್ನೇ ಭದ್ರ ಮಾಡಿಕೊಂಡಿದ್ದವರಿಗೆ ಚೆಲುವಿ ದೊಡ್ಡವಳಾಗುವ ಸಮಯಕ್ಕೆ ಅಂಬೇಡ್ಕರ್ ಆವಾಸ್ ಯೋಜನೆಯಡಿಯಲ್ಲಿ ಲಂಕೆಪ್ಪನವರು ಒಂದು ಮನೆ ಕಟ್ಟಿಸಿಕೊಟ್ಟಿದ್ದರು. ಭರಮಪ್ಪ ಗೌಡರು ವಯಸ್ಸಾಗುತ್ತಿದ್ದಂತೆ ದೇವರಿಗೆ ಕೆಳಗಿನ ತುಂಡದ ಜತೆಗೆ ಊರ ಹಿಂದಲ ತೋಟದ ಉಸ್ತುವಾರಿಯನ್ನೂ ಕೊಟ್ಟಿದ್ದರು.



'ಚೋಮನದುಡಿ' ಸಿನಿಮಾ ನೋಡುತ್ತಾ ಕಣ್ಣುತುಂಬಿಕೊಳ್ಳುತ್ತಿದ್ದ ದೇವರನ್ನು ಮೊಬೈಲಿನಲ್ಲೇ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದ ಗೌಡರ ಮಗ ಸಂಜೀವ ಗಮನಿಸಿದನು. ಗೌಡರ ರಾಜಕೀಯ ವರಾತಗಳು, ಜಯಮ್ಮನವರ ಧಾರಾವಾಹಿ ಚರ್ಚೆಗಳ ಹಂಗಿಲ್ಲದೆ ಟೀವಿಯಲ್ಲಿ ಮುಳುಗಿದ್ದ ದೇವರನ್ನು ಗಮನಿಸಿದ ಸಂಜೀವ ಅವನ ಮನದ ಇಂಗಿತವನ್ನು ಅರಿತಂತೆ ಕಂಡನು. 'ಓಯ್ ದೇವ್ರು ಮಾಮ ಅದು 'ಚೋಮನ ದುಡಿ' ಅನ್ನೋ ಸಿನಿಮಾ. ಶಿವರಾಮ ಕಾರಂತರು ಅನ್ನುವ ದೊಡ್ಡ ಸಾಹಿತಿಗಳು ಬರೆದ ಕಾದಂಬರಿನ ಸಿನಿಮಾ ಮಾಡವ್ರೆ. ಅವನಿಗೆ ಒಂದಿಷ್ಟಾದ್ರೂ ಭೂಮಿಗೆ ಒಡೆಯ ಆಗ್ಬೇಕಂತಾ ಆಸೆ